



# ಮತ್ತೆ ತೆರೆಗೆ ಜಾನ್-ಅಭಿಷೇಕ್

‘ದೋಸ್ತಾನಾ’ ಹಿಂದಿ ಚಿತ್ರ ತೆರೆಕಂಡಿದ್ದು 2008ರಲ್ಲಿ. ಜಾನ್ ಅಬ್ರಹಾಂ ಹಾಗೂ ಅಭಿಷೇಕ್ ಬಚ್ಚನ್ ನಡುವಿನ ಕೆಮಿಸ್ಟ್ರಿ ಬಗೆಗೆ ಆಗ ಒಳ್ಳೆಯ ಮಾತು ಕೇಳಿಬಂದಿತ್ತು. ಈಗ ಮತ್ತೆ ಈ ಇಬ್ಬರು ತೆರೆಮೇಲೆ ಕಾಣಿಸಿಕೊಳ್ಳಲು ಮಾತುಕತೆ ನಡೆದಿದೆ. ಮಲಯಾಳಂನಲ್ಲಿ ಜನಪ್ರಿಯವಾದ ‘ಅಯ್ಯಪ್ಪನುಂ ಕೋಷಿಯುಂ’ ಚಿತ್ರದ ರೀಮೇಕ್ ಹಕ್ಕನ್ನು ಜಾನ್ ಅಬ್ರಹಾಂ ಕಳೆದ ವರ್ಷವೇ ಪಡೆದುಕೊಂಡಿದ್ದರು. ಅವರೀಗ ಆ ಚಿತ್ರವನ್ನು ಹಿಂದಿಯಲ್ಲಿ ರೀಮೇಕ್ ಮಾಡಲಿದ್ದು, ಇಬ್ಬರೂ ನಟಿಸುವ ಕುರಿತು ಸುತ್ತುಗಟ್ಟಲೆ ಚರ್ಚೆ ನಡೆದಿದೆ. ಅದಕ್ಕೆ ಸಂಬಂಧಿಸಿದ ಪತ್ರವ್ಯವಹಾರಗಳೂ ಮುಗಿದಿವೆ.

ಮಲಯಾಳಂ ಚಿತ್ರವನ್ನು ನಿರ್ದೇಶಿಸಿದ್ದ ಸಾಚಿ ಈಗ ಬರೀ ನೆನಪು. ಅವರ ನಿಧನಾನಂತರವೂ ಚಿತ್ರದ ಯಶಸ್ಸಿನ ಅಲೆ ತಗ್ಗಿಲ್ಲ. ಕಳೆದ ವರ್ಷ ಲಾಕ್‌ಡೌನ್‌ಗೆ ಮೊದಲೇ ತೆರೆಕಂಡಿದ್ದ ‘ಅಯ್ಯಪ್ಪನುಂ ಕೋಷಿಯುಂ’ನಲ್ಲಿ ಪೃಥ್ವಿರಾಜ್ ಹಾಗೂ ಬಿಜು ಮೆನನ್ ಅಭಿನಯಿಸಿದ್ದರು. ಸ್ವಪ್ರತಿಷ್ಠೆಗೆ ಬೀಳುವ ಒಬ್ಬ, ಆತ್ಮಗೌರವದಿಂದ ಎದೆಯುಬ್ಬಿಸುವ ಇನ್ನೊಬ್ಬ–ಈ ಎರಡು ಭಿನ್ನ ಮನಸ್ಸಿನ ವ್ಯಕ್ತಿಗಳ ನಡುವಿನ ಸಂಘರ್ಷದ ಕಥಾನಕವಾಗಿ ಅದು ಜನಮನ ಗೆದ್ದಿತ್ತು. ■

# ರಿಯಾನಾ ರೆಗೆ

■ ವಿಶಾಖ ಎನ್.



ನಮ್ಮ ದೇಶದ ರೈತರ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದ ರಿಯಾನಾ ಯಾರು ಎಂಬ ಸಂದೇಶಗಳು ಹರಿದಾಡುತ್ತಿವೆ. ಅವರು ಯಾರೆಂದರೆ...

‘ಮ್ಯೂಸಿಕ್ ಆಫ್ ದಿ ಸನ್’ ಹೆಸರಿನ ಮ್ಯೂಸಿಕ್ ಆಲ್ಬಂ ಹೊರಬಂದು ಹದಿನಾರು ವರ್ಷಗಳುರುಳಿದವು. ಬಾರ್ಬಡೋಸ್‌ನ ಬ್ರಿಡ್ಜ್‌ಟೌನ್‌ನಿಂದ ಅಮೆರಿಕಕ್ಕೆ ಸಂಗೀತದ ಮೇಘದ ಮೇಲೆ ಕುಳಿತು ಬಂದ ರಿಯಾನಾ ಬದುಕಿನ ಗತಿಯನ್ನು ಬದಲಿಸಿದ ಆಲ್ಬಂ ಅದು. ಡೆಫ್ ಜಾಮ್ ರೆಕಾರ್ಡಿಂಗ್ಸ್ ಎಂಬ ಕಂಪನಿಯು ಬಾರ್ಬಡೋಸ್ ಹುಡುಗಿಯ ಸ್ವರಶಕ್ತಿ, ಸಂಗೀತ ಜ್ಞಾನಕ್ಕೆ ಮನಸೋತು ಅಮೆರಿಕೆಗೆ ಕರೆಸಿತ್ತು.

ರಿಯಾನಾ ಆಫ್ರೊ–ಬಾರ್ಬಡಿಯನ್, ಆಫ್ರೋ–ಗಯಾನೀಸ್. ಅಮ್ಮ ಮೋನಿಕಾ ಲೆಕ್ಕಗರಾಗಿದ್ದರು. ಅಪ್ಪ ರೊನಾಲ್ಡ್ ಫೆಂಟಿ ಕೆಲಸ ಮಾಡುತ್ತಿದ್ದುದು ವೇರ್‌ಹೌಸ್‌ನಲ್ಲಿ. ಮೂರು ಕೋಣೆಗಳ ಬಂಗಲೆಯಲ್ಲಿ ಬೆಳೆದರೂ ಕುಡಿತ, ಕೊಕೇನ್‌ನ ಚಟ ಅಂಟಿಸಿಕೊಂಡ ಅಪ್ಪನ ಹಳವಂಡಗಳನ್ನು ಕಂಡುಂಡೇ ಬೆಳೆದ ರಿಯಾನಾಗೆ ಬಾಲ್ಯದಲ್ಲಿ ವಿಪರೀತ ತಲೆನೋವು ಕಾಡಿತ್ತು. ಮೆದುಳಿನಲ್ಲಿ ಗಡ್ಡೆ ಇರಬಹುದೇನೋ ಎಂದು ವೈದ್ಯರು ಶಂಕಿಸಿ, ಎಲ್ಲ ರೀತಿಯ ತಪಾಸಣೆಯನ್ನೂ ಮಾಡಿದ್ದರು. ಆದರೆ, ಅದು ಮಾನಸಿಕ ಯಾತನೆಯ ಭಾಗವಾಗಿ ಇದ್ದ ನೋವು.

ಹದಿನಾಲ್ಕನೇ ವಯಸ್ಸಿನ ಹೊತ್ತಿಗೆ ಅಪ್ಪ–ಅಮ್ಮ ಬೇರೆಯಾದರು. ಓದಿನ ಜತೆ ಜತೆಗೇ ಅರೆ ಮಿಲಿಟರಿ ತರಬೇತಿಯನ್ನೂ ಶಾಲೆ ನೀಡುತ್ತಿತ್ತು. ಹದಿನೈದು ತುಂಬುವ ಹೊತ್ತಿಗೆ ಸಂಗೀತವನ್ನೇ ತನ್ನ ಬದುಕನ್ನಾಗಿಸಿಕೊಳ್ಳಬೇಕು ಎಂಬ ಸಂಕಲ್ಪ ಮಾಡಿದರು. ಅಮೆರಿಕದ ರೆಕಾರ್ಡಿಂಗ್ ಪ್ರೊಡ್ಯೂಸರ್ ಇವಾನ್ ರೋಜರ್ಸ್ ಎನ್ನುವವರ ಬಳಿಗೆ ಇಬ್ಬರು ಸಹಪಾಠಿಗಳನ್ನು ಕರೆದುಕೊಂಡು ಹೋಗಿ, ಹಾಡು ಕಟ್ಟುವುದಾಗಿ ಗಟ್ಟಿಯಾಗಿ ಹೇಳಿದ್ದೇ ಆಗ. ಆತ್ಮವಿಶ್ವಾಸ ಕಂಡೇ ರೋಜರ್ಸ್ ಕರಗಿಹೋದರು.

ಜಮೈಕಾದ ಪಾಪ್ ಸಂಗೀತ ಪ್ರಕಾರವನ್ನು ‘ರೆಗೆ’ ಎಂದು ಕರೆಯುತ್ತಾರೆ. ಯುವಕ–ಯುವತಿಯರ ಪಾಲಿಗೆ ಅದು ಸೂಜಿಗಲ್ಲು. ರಿಹಾನಾ ರಿಯಾಜ್ ಮಾಡಿದ್ದು ಅದೇ ಸಂಗೀತದಲ್ಲಿ. ಅಮೆರಿಕಕ್ಕೆ ಹಾರಿದ ಮೇಲೂ ತವರಿನ ದನಿ, ಸಂಗೀತದ ಬನಿಯನ್ನು ಕಾಪಾಡಿಕೊಂಡೇ ಹಾಡುಗಳನ್ನು ಕಟ್ಟಿದರು.

ಫ್ಯಾಷನ್ ಡಿಸೈನರ್ ಆಗಿ ಬೆಳೆದರು. ವ್ಯಾಪಾರಿಯಾಗಿಯೂ ದಾಪುಗಾಲಿಟ್ಟರು. ‘ಎಲ್ಲಕ್ಕೂ ಸಮಯ ಹೊಂದಿಸುವುದೇ ಕಷ್ಟವಾಗುತ್ತಿತ್ತು. ನಾನು ಮಾನಸಿಕವಾಗಿ ಕುಗ್ಗಿಹೋದೆ. ಅಭಿಮಾನಿಗಳು, ಸ್ನೇಹಿತರೆಲ್ಲ ನನ್ನನ್ನು ಮನ್ನಿಸಬೇಕು. ಎಲ್ಲವನ್ನೂ ತೂಗಿಸಿಕೊಂಡು ಹೋಗುವುದು ಹೇಗೆ ಎಂಬ ಜಿಜ್ಞಾಸೆಯಲ್ಲಿದ್ದೇನೆ’ ಎಂಬ ಪೋಸ್ಟ್ ಅನ್ನು ಇನ್‌ಸ್ಟಾಗ್ರಾಂನಲ್ಲಿ ಅವರು ವರ್ಷದ ಹಿಂದೆ ಹಾಕಿದ್ದರು. ವಿಶ್ವದಾದ್ಯಂತ ಕೋಟ್ಯಂತರ ಅಭಿಮಾನಿಗಳನ್ನು ಹೊಂದಿರುವ ರಿಯಾನಾ ತುಟಿರಚನೆಯಿಂದಲೇ ಅವರ ಆತ್ಮವಿಶ್ವಾಸವನ್ನು ಅಳೆಯಬಹುದು ಎಂದು ಮನೋವಿಜ್ಞಾನಿಗಳು ಹೇಳಿರುವುದು ವಿಶೇಷ. ■